ಅಲ್ಜೀರಿಯಾವನ್ನು ಸ್ವತಂತ್ರಗೊಳಿಸಲು ಹೋರಾಡುತ್ತಿದ್ದ ಗುಂಪುಗಳಿಗೆ ಸಹಾಯಮಾಡುತ್ತಿದ್ದ ಸಂದರ್ಭದಲ್ಲಿ ಒಮ್ಮೆ ಅವರು ನಕಲಿನೋಟುಗಳ ಮೂಲಕ ಫ್ರಾನ್ಸಿನ ಆರ್ಥಿಕತೆಯನ್ನು ಬುಡಮೇಲು ಮಾಡುವ ಯೋಜನೆ ರೂಪಿಸಿದರು. ಇದಕ್ಕಾಗಿ ಒಂದೆರಡು ಪ್ರಯತ್ನಗಳು ನಡೆದು ವಿಫಲವಾದ ಮೇಲೆ ಅದು ನನ್ನತ್ತ ಬಂದಿತು. ಆಗ ಸರಿಸುಮಾರು 10 ಕೋಟಿ ಫ್ರಾಂಕ್ ನೋಟುಗಳನ್ನು ತಯಾರಿಸಿದ್ದೆ. ಅವುಗಳನ್ನು ಚಲಾವಣೆಗೆ ತರುವ ಪ್ರಮೇಯವೇ ಬರಲಿಲ್ಲ. 1962ರಲ್ಲಿ ಅಲ್ಜೀರಿಯಾ ಸ್ವತಂತ್ರವಾಯಿತು. ಹಾಗಾಗಿ ಆ ಎಲ್ಲ ನಕಲಿ ನೋಟುಗಳನ್ನು ಸರಿಸುಮಾರು ಒಂದು ವರ್ಷದವರೆಗೆ ಸ್ವಲ್ಪ ಸ್ವಲ್ಪವೇ ಸುಟ್ಟುಬಿಟ್ಟೆವು.

★★★

ನನ್ನ ನಂತರ ನಕಲಿ ದಾಖಲೆಗಳನ್ನು ಸೃಷ್ಟಿಸಲು ಜನ ಬೇಕಾಗುತ್ತಾರೆ ಎಂದು ನಾನು ಕೆಲಸ ಮಾಡಿದ ತಂಡಗಳು ಕೆಲವರನ್ನು ತರಬೇತಿಗೆಂದು ನನ್ನ ಬಳಿ ಕಳಿಸುತ್ತಿದ್ದರು. ಹಾಗೆ ಹಲವರಿಗೆ ತರಬೇತಿಯನ್ನೇನೋ ನೀಡಿದೆ. ಆದರೆ ಅವರಲ್ಲಿ ಸುಮಾರು ಮಂದಿ ಎಲ್ಲ ಮುಗಿಯಿತು ಎನ್ನುವಾಗ 'ನಕಲಿ ನೋಟು' ಸೃಷ್ಟಿಸುವುದು ಹೇಗೆ ಎನ್ನುವ ಪ್ರಶ್ನೆ ಮುಂದಿಡುತ್ತಿದ್ದರು. ನಕಲಿ ದಾಖಲೆಗಳನ್ನು ಸೃಷ್ಟಿಸುವುದು ನನಗೆ ಮತ್ತೊಬ್ಬರ ಜೀವವನ್ನು ರಕ್ಷಿಸುವುದಕ್ಕಿದ್ದ ಮಾರ್ಗ ಮಾತ್ರವಾಗಿತ್ತು. ಅದನ್ನು ಹಣಕ್ಕಾಗಿ ಎಂದು ಅರ್ಥಮಾಡಿಕೊಂಡು ಕಲಿಯಲು ಬರುತ್ತಿದ್ದವರನ್ನು ಕಂಡಾಗ ಅಸಹನೆಯುಂಟಾಗುತ್ತಿತ್ತು.

★★★

ಸರಿಸುಮಾರು ಮೂವತ್ತು ವರ್ಷಗಳ ಕಾಲ ಈ ರೀತಿಯ ನಕಲಿಗಳ ಸೃಷ್ಟಿಯ ಜೀವನ ನಡೆಸಿದ ಮೇಲೆ ಆ ಬದುಕಿನ್ನು ಸಾಕು ಅನ್ನಿಸಿತು. ಅದಕ್ಕೊಂದು ಘಟನೆ ಕಾರಣವಾಯಿತು. ನಾನೇ ಸೃಷ್ಟಿಸಿದ್ದ ನಕಲಿ ಪಾಸ್‌ಪೋರ್ಟೊಂದು ಮೂರು ಬಾರಿ ಬೇರೆ ಬೇರೆ ಮೂಲಗಳ ಮೂಲಕ ನನ್ನ ಬಳಿಗೆ ನಕಲಿಯೊಂದನ್ನು ಸೃಷ್ಟಿಸುವ ಬೇಡಿಕೆ ಹೊತ್ತು ಬಂದಿತು. ನನಗದು ಎಚ್ಚರಿಕೆಯ ಗಂಟೆಯಾಯಿತು. ಇದರಿಂದ ಹೊರಬೀಳದಿದ್ದರೆ ನನ್ನ ವೈಯುಕ್ತಿಕ ಬದುಕು ಸಂಪೂರ್ಣವಾಗಿ ನಾಶವಾಗಿಬಿಡುತ್ತಿತ್ತು. ಆ ವೇಳೆಗೆ ನನ್ನ ದಾಂಪತ್ಯ ಮೂರು ಬಾರಿ ಮುರಿದು ಬಿದ್ದಿತ್ತು. ವಿಫಲ ಪ್ರೇಮ ಪ್ರಕರಣಗಳು ನಡೆದಿದ್ದವು. ಕಡೆಗೆ ನನ್ನ ನಲವತ್ತಾರನೆಯ ವಯಸ್ಸಿನಲ್ಲಿ ಹೊಸ ಮದುವೆಯಾಗಿ ನನ್ನ ಬದುಕನ್ನು ಕಟ್ಟಿಕೊಂಡೆ. ಅಲ್ಲಿಂದ ಮುಂದೆ ಫೋಟೊಗ್ರಫಿಯೊಂದೇ ನನ್ನ ವೃತ್ತಿಯಾಯಿತು.


**ಹೇಮಾ ಎಸ್.**

ಅನುವಾದಕಿ ಹೇಮಾ, ಕನ್ನಡದಲ್ಲಿ ಎಂ.ಎ ಹಾಗೂ ಪಿಎಚ್.ಡಿ ಪದವೀಧರೆ. ಕನ್ನಡ ಉಪನ್ಯಾಸಕಿಯಾಗಿ ಕೆಲಸಮಾಡಿದ್ದಾರೆ. ಆಕಾಶವಾಣಿಯಲ್ಲಿ ಕೆಲವು ಕಾಲ ಉದ್ಘೋಷಕಿಯಾಗಿ ಕಾರ್ಯನಿರ್ವಹಣೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಿಂದ ಲೇಖನ, ಕತೆ ಹಾಗೂ ಕವಿತೆಗಳನ್ನು ಕನ್ನಡಕ್ಕೆ ಅನುವಾದಿಸುತ್ತ ಬಂದಿದ್ದಾರೆ. ಸಿನಿಮಾ ನಿರ್ದೇಶಕ ಅಬ್ಬಾಸ್ ಕಿರೊಸ್ತಾಮಿಯ ಕಿರುಕವಿತೆಗಳ ಅನುವಾದಿತ ಪುಸ್ತಕ 'ಹೆಸರಿಲ್ಲದ ಹೂ' ಪ್ರಕಟಿಸಿದ್ದಾರೆ.